ಒಂದು ಪ್ರಸಂಗವನ್ನು ಹಂಚಿಕೊಳ್ಳಲು ಬಯಸುತ್ತೇನೆ. ಒಮ್ಮೆ ಕಲಬುರ್ಗಿಯಲ್ಲಿ ರಾಷ್ಟ್ರಪತಿ ಡಾ. ಎ.ಪಿ. ಜೆ. ಅಬ್ದುಲ್ ಕಲಾಂ ಅವರ ಭಾಷಣ ಕೇಳಲು ಹೋಗಿದ್ದೆ. ಅಲ್ಲಿ ಒಂದು ಮಗು ಕಲಾಂ ಅವರಿಗೆ, 'ನಾನು ಎಂಟನೇ ತರಗತಿಯಲ್ಲಿ ಓದುತ್ತಿದ್ದೇನೆ. ನನ್ನ ತಂದೆ ತಾಯಿ ನನಗೆ ಸಂಗೀತ–ನೃತ್ಯದ ತರಗತಿಗಳಿಗೂ ಹೋಗಲು ಒತ್ತಾಯಿಸುತ್ತಾರೆ. ನಾನು ಓದಿನ ಜೊತೆಗೆ ಇವುಗಳನ್ನೆಲ್ಲ ಹೇಗೆ ನಿಭಾಯಿಸಲಿ?' ಎಂದು ಪ್ರಶ್ನೆ ಮಾಡಿತು. ಅದಕ್ಕೆ ಅವರು, 'ಮಗು ನೀನು ಏನಾಗಬೇಕು ಅಂದುಕೊಂಡಿರುವೆ, ಅದರತ್ತ ಗಮನ ಕೊಡು. ಉಳಿದದ್ದನ್ನು ಬದಿಗಿಡು' ಎಂದು ಸಲಹೆ ನೀಡಿದರು. ಯಾವುದೇ ಕ್ಷೇತ್ರದಲ್ಲಿ ಯಶಸ್ವಿ ಪಡೆದವರು ಹೇಳುವುದು ಹೀಗೆಯೇ. ಇದು ಎಷ್ಟು ಸಮಂಜಸ? ಮಕ್ಕಳು ಬೆಳೆದು ಮುಂದೆ ಏನಾದರೂ ಆಗಲಿ, ಅವರ ಮನೋವಿಕಾಸಕ್ಕೆ ಪೂರಕವಾಗಿ ಕಲೆ, ನೃತ್ಯ, ಸಾಹಿತ್ಯ, ಸಂಗೀತದ ಗಾಳಿ ಒಂದಿಷ್ಟಾದರೂ ಬೇಕೇ ಬೇಕು. ಇಲ್ಲದಿದ್ದರೆ ಬದುಕು ನೀರಸವಾಗುತ್ತದೆ. ಮಕ್ಕಳಿಗೆ ಈ ದಿಶೆಯಲ್ಲಿ ಪ್ರೋತ್ಸಾಹ ನೀಡುವುದು ಎಲ್ಲರ ಕರ್ತವ್ಯವಾಗಿದೆ. ಸಂದರ್ಭ–ಸನ್ನಿವೇಶ ಹೇಗಿದ್ದರೂ ಒಬ್ಬ ಬರಹಗಾರನ ಬರವಣಿಗೆ ನಿರಂತರವಾಗಿ ಒತ್ತದ ಝರಿಯಾಗಿ ಸಾಗಬೇಕು. ಮರಳುಗಾಡಿನಲ್ಲಿಯ ಓಯಸಿಸ್‌ನಂತೆ ಬರೆಯುವವರು ಓದುವವರು ಇದ್ದೇ ಇರುತ್ತಾರೆ ಎಂದುಕೊಂಡೂ, ಬರೆಯುವುದು ಅದು ನನ್ನ ಸುಖಕ್ಕಾಗಿ ಎಂದುಕೊಂಡೂ ಉತ್ಸಾಹದಿಂದ ಬರೆಯುತ್ತಾ ಹೋಗುವುದು ಅವನ ಕರ್ಮವಾಗಬೇಕು; ಇದಕ್ಕೆ ನಾನೂ ಹೊರತಲ್ಲ.

## 4

'ಮಕ್ಕಳಿಗಾಗಿ ಬರೆಯುವವರು ಪರಕಾಯ ಪ್ರವೇಶ ಮಾಡುವ ಗುಣ ಹೊಂದಿರಬೇಕು' – ಮಕ್ಕಳಿಗಾಗಿ ಬರೆಯುವ ದೊಡ್ಡವರೆಲ್ಲರೂ ಮೊದಲು ಹೇಳುವ ಮಾತು ಇದು. ನಾನು ಬಯಸುವುದೇನೆಂದರೆ, ನಾವು ದೊಡ್ಡವರಾದ ಮೇಲೆ ನಮ್ಮಲ್ಲಿ ಪ್ರವೇಶವಾದ ದೊಡ್ಡತನವೆಂಬ ಪರಕಾಯವನ್ನು ಮೊದಲು ಹೊರದಬ್ಬಿ ಮೊದಲಿನಂತೆ ಬಾಲ್ಯಕ್ಕೆ ಮರಳಬೇಕು. ನಮ್ಮ ಬಾಲ್ಯಕ್ಕೂ ಇಂದಿನ ಮಕ್ಕಳ ಬಾಲ್ಯಕ್ಕೂ ಅಂತರವಿದೆ ಎಂದು ತಿಳಿಯಬೇಕು. ಮಗುವಿನ ಸಹಜ ಮನಸ್ಸಿನ ಸ್ಥಿತಿಗಿಳಿಯಬೇಕು. ಮಕ್ಕಳ ಆಸಕ್ತಿ, ಅರಿವು, ಆಕರ್ಷಣೆ, ಹುಡುಗಾಟ ಅರಿತರೆ ಎಂಥವರಿಗೂ ಮಕ್ಕಳ ಸಾಹಿತ್ಯ ರಚನೆ ಸಾಧ್ಯ.

ಮಕ್ಕಳು ಬಹು ಬೇಗ ಹೊರ ಜಗತ್ತಿನ ಪ್ರಭಾವಗಳಿಗೆ ಗುರಿಯಾಗುತ್ತಾರೆ. ಪುಸ್ತಕಗಳೂ ಅವರಿಗೆ ದಾರಿ ತಪ್ಪಿಸುವ ಸಾಧನಗಳಾಗಬಹುದು. ವಿದೇಶದಲ್ಲಿಯ ಎಷ್ಟೋ ಮಕ್ಕಳ ಪುಸ್ತಕಗಳಲ್ಲಿ ನಮ್ಮ ಸಂಸ್ಕೃತಿಗೆ ಒಗ್ಗದ ಕೆಲವು ಆಕ್ಷೇಪಾರ್ಹ ವಿಷಯಗಳು ಒಳಗೊಂಡಿವೆ. ನಮ್ಮ ಮಕ್ಕಳ ಪುಸ್ತಕಗಳಲ್ಲಿ ಅಂಥವುಗಳನ್ನು ಕಾಣಿಸುವುದು ಎಷ್ಟು ಸೂಕ್ತವೋ ಎಂಬುದು ಚರ್ಚೆಯ ವಿಷಯ. ಒಟ್ಟಿನಲ್ಲಿ ತಮ್ಮ ಪುಸ್ತಕಗಳು ಮಕ್ಕಳ ಪುಸ್ತಕಗಳಾಗಲು ಅವು ಮಕ್ಕಳ ಮೇಲೆ ಬೀಳುವ ಪರಿಣಾಮಗಳನ್ನು ಬರೆಯುವವರು ಗಮನದಲ್ಲಿಟ್ಟುಕೊಳ್ಳಬೇಕು. ಮಕ್ಕಳ ಪುಸ್ತಕಗಳಲ್ಲಿ ಮಕ್ಕಳಿಗೆ ಹಿತ–ಮಿತವಾದದ್ದು, ಉತ್ತಮ ಅಭಿರುಚಿಯುಳ್ಳದ್ದು, ಅವರ ಮನ ರಂಜಿಸುವಂಥಾದ್ದು ಇರಬೇಕು.

ಉಪದೇಶಕ್ಕಾಗಿ ಈಸೋಪನ ನೀತಿ ಕಥೆಗಳು, ಪಂಚತಂತ್ರದ ಕಥೆಗಳು, ಬುದ್ಧನ ಜಾತಕ ಕಥೆಗಳು, ಬೇತಾಳನ ಕಥೆಗಳು ಎಷ್ಟೋ ಕಾಲದಿಂದ ಈಗಾಗಲೇ ಪ್ರಚಲಿತದಲ್ಲಿವೆ. ಉಪದೇಶಭರಿತ ಹಾಡುಗಳು ಇವೆ. ಇಷ್ಟೆಲ್ಲ ಇರುವಾಗ ಮತ್ತದೇ ಚರ್ವಿತ ಚರ್ವಣ ರಚನೆಗಳು ಬೇಕೆ? ಆದರೆ ಇಂದು ಮಕ್ಕಳ ಕಥಾಲೋಕ, ಕಾವ್ಯಲೋಕ ಹೊಸತಿಗೆ ಸಾಕಷ್ಟು ತುಡಿಯುತ್ತಿದೆ. ಇಂದಿನ ಅನೇಕ ಹಳೆಯ ಮತ್ತು ಹೊಸತಲೆಮಾರಿನ ಲೇಖಕರು ಆ ನಿಟ್ಟಿನಲ್ಲಿ ಸಕ್ರಿಯರಾಗಿದ್ದಾರೆ. ಹೊಸ ಸಂವೇದನೆಗಳು, ಹೊಸ ಭಾಷೆ ಇಂದಿನ ಅಗತ್ಯವಾಗುತ್ತಿದೆ ಎಂಬುದರ ಅರಿವು ನಮ್ಮಲ್ಲಿ ಸದಾ ಜಾಗೃತವಾಗಿರಬೇಕಾಗಿದೆ. ಸುಲಭವಾಗಿ ಮಕ್ಕಳಿಗೆ ಬರೆಯುವುದು ಎಷ್ಟು ಕಷ್ಟವೋ, ಬರೆದದ್ದನ್ನು ಅವರಿಗೆ ತಲುಪಿಸುವುದೂ ಇನ್ನೂ ಕಷ್ಟದ ಸಂಗತಿಯೇ.

## 5

ಮಕ್ಕಳೊಂದಿಗೆ ಮಕ್ಕಳಾಗಿ ಬೆರೆತರೆ ಮಕ್ಕಳಿಗೆ ಬೇಕಾದುದು ಏನು ಎಂದು ತಿಳಿದುಕೊಳ್ಳುವುದು ಸುಲಭ. ಈ ಜಗತ್ತು ಒಬ್ಬೊಬ್ಬರಿಗೆ ಒಂದೊಂದು ತರಹ ಕಾಣುತ್ತದೆ. ಮಕ್ಕಳ ಜಗತ್ತು ಅದು ನಾವು ಅಂದುಕೊಂಡಿದ್ದಕ್ಕಿಂತಲೂ ಬೇರೆಯದ್ದೇ ಆಗಿರುತ್ತದೆ.